# ಕಾರ್ಯಕ್ರಮಗಳ ವರದಿ ಮಾರ್ಚ್ -2023

**01.03.2023: ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಲಯದ ಉದ್ಘಾಟನಾ ಸಮಾರಂಭ:** ಮೈಸೂರು ವಲಯದ ಉದ್ಘಾಟನೆಯನ್ನು ರಾಣಿ ಬಹದ್ದೂರ್ ಆಡಿಟೋರಿಯಂ ಮೈಸೂರಿನಲ್ಲಿ, SOTTO ಕರ್ನಾಟಕ ಮತ್ತು ಅಪೋಲೋ BGS ಮೈಸೂರು ಸಹಯೋಗದಲ್ಲಿ ನಡೆಸಲಾಯಿತು. ಮೈಸೂರು, ಹಾಸನ, ಮಂಡ್ಯ, ಕೊಡಗು ಮತ್ತು ಚಾಮರಾಜನಗರದಲ್ಲಿ ಅಂಗಾಂಗ ಕಸಿಯನ್ನು ಉತ್ತೇಜಿಸಲು ಕಾರ್ಯಕ್ರಮದಲ್ಲಿ ಮೈಸೂರು ಅನ್ನು ಸೊಟ್ಟೊ ಕರ್ನಾಟಕ (ಕರ್ನಾಟಕ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ) ಅಡಿಯಲ್ಲಿ 5 ನೇ ವಲಯವಾಗಿ ಘೋಷಿಸಲಾಲಾಯಿತು.

ಡಾ.ಕಿರಣ್ ಕುಮಾರ್ ಜಂಟಿ ನಿರ್ದೇಶಕ ವೈದ್ಯಕೀಯ ಮತ್ತು ಜೀವಸಾರ್ಥಕಥೆ/ ಸೊಟ್ಟೊ ಕರ್ನಾಟಕದ ಸದಸ್ಯ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮೈಸೂರಿನ MMC&RI ನಿರ್ದೇಶಕರಾದ ಡಾ. ದಾಕ್ಷಾಯಣಿ, ಡಾ. M R ನಿರಂಜನ್ ನೋಡಲ್ ಅಧಿಕಾರಿಗಳು, ಡಾ. M S ರಾಜೇಶ್ RMO MMC&RI, ಡಾ. ಚಿನ್ನದುರೈ ಸೊಟ್ಟೊ ಕರ್ನಾಟಕದ ಮೆದುಳಿನ ಸಾವಿನ ಘೋಷಣೆ ಸಮಿತಿ ಸದಸ್ಯರು, ಶ್ರೀ ಭರತೀಶ ರೆಡ್ಡಿ, ಅಪೋಲೋ BGS ಆಸ್ಪತ್ರೆಗಳ ಉಪಾಧ್ಯಕ್ಷರು ಮತ್ತು ಘಟಕದ ಮುಖ್ಯಸ್ಥರು ಮೈಸೂರು, ಶ್ರೀಮತಿ ಲಿಜಾಮೋಲ್ ಜೋಸೆಫ್, ಮುಖ್ಯ ಕಸಿ ಸಂಯೋಜಕರು, ಮತ್ತು ಸೊಟ್ಟೊ ಕರ್ನಾಟಕದ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




















**01.03.2022: ವೆನ್ಲಾಕ್ ಆಸ್ಪತ್ರೆ ಗ್ರಂಥಾಲಯದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ರೆಡ್ ಕ್ರಾಸ್ ಸೊಸೈಟಿಯು ವೆನ್ಲಾಕ್ ಆಸ್ಪತ್ರೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಅಂಗಾಂಗ ದಾನದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ SOTTO ಮಂಗಳೂರು ವಲಯದ ಅಂಗಾಂಗ ಕಸಿ ಸಂಯೋಜಕಿ ಪದ್ಮಾ ಅವರು ಅಂಗಾಂಗ ದಾನದ ಅಗತ್ಯತೆ ಮತ್ತು ಪ್ರಾಮುಖ್ಯತೆ, ಬ್ರೈನ್ ಡೆಡ್ ಪರಿಕಲ್ಪನೆ ಮತ್ತು ಅಂಗಾಂಗಗಳ ಪ್ರತಿಜ್ಞೆಯ ಮಹತ್ವವನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 15 ಸದಸ್ಯರು ಭಾಗವಹಿಸಿದ್ದರು ಮತ್ತು 3 ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ವಾಗ್ದಾನ ಮಾಡಿದರು.






**04.03.2023: ಉಡುಪಿಯಲ್ಲಿ ಅಂಗಾಂಗ ದಾನದ ಪ್ರತಿಜ್ಞೆ ಕುರಿತು 7ನೇ ಜಿಲ್ಲಾ ಸಮ್ಮೇಳನ:** ರೋಟರಿ ಕ್ಲಬ್‌ನ 7ನೇ ಜಿಲ್ಲಾ ಸಮ್ಮೇಳನ ಉಡುಪಿಯ ಬಿಎಂಎಂ ಸಭಾಂಗಣದಲ್ಲಿ ನಡೆಯಿತು. ಅಂಗಾಂಗ ದಾನ ಮತ್ತು ಕಸಿ ಕುರಿತು ಸಭೆಯನ್ನು ಉದ್ದೇಶಿಸಿ ಮಾತನಾಡಲು ಜೀವಸಾರ್ಥಕಥೆ/ SOTTO ಕರ್ನಾಟಕದಿಂದ ಶ್ರೀಮತಿ ಲಿಜಾಮೋಲ್ ಜೋಸೆಫ್ ಮುಖ್ಯ ಕಸಿ ಸಂಯೋಜಕರನ್ನು ಆಹ್ವಾನಿಸಲಾಗಿತ್ತು. ನಾರಾಯಣ ಹೆಲ್ತ್‌ನ ಹೃದ್ರೋಗ ತಜ್ಞ ಡಾ.ಬಗೀರಥ ಆರ್ ಮತ್ತು ಸೇಂಟ್ ಜಾನ್ಸ್ ಆಸ್ಪತ್ರೆಯ ನೆಲಫ್ರಾಜಿಸ್ಟ್ ಡಾ.ಅರ್ಪಣಾ ಅಯ್ಯಂಗಾರ್ ಸಮ್ಮೇಳನ ಸಭೆಯಲ್ಲಿ ಭಾಗವಹಿಸಿದ್ದರು. " ಅಂಗಾಂಗಕ್ಕಾಗಿ ಕಾಯುತ್ತಿರುವ ರೋಗಿಗಳ ಪಟ್ಟಿಯಲ್ಲಿ ಯಾರೂ ಅಂಗಾಂಗ ಸಿಗದೇ ಸಾಯಬಾರದು" ಅಂಗಾಂಗ ದಾನ ರಾಯಭಾರಿಗಳಾಗಲು ಪಣ ತೊಡೋಣ ಎಂಬ ಉದ್ದೇಶದಿಂದ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.












**09.03.2023: ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ವಿಶ್ವ ಕಿಡ್ನಿ ದಿನಾಚರಣೆ ಕಾರ್ಯಕ್ರಮ:** ನಾರಾಯಣ ಹೃದಯಾಲಯವು ವಿಶ್ವ ಕಿಡ್ನಿ ದಿನವನ್ನು ಆಚರಿಸಲು ಕಾರ್ಯಕ್ರಮವನ್ನು ಆಯೋಜಿಸಿತ್ತು. ನಾರಾಯಣ ಹೃದಯಾಲಯದ ಸಿಇಒ ಡಾ.ಇಮ್ಯಾನುಯೆಲ್ ರೂಪತ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಾರಾಯಣ ಹೃದಯಾಲಯದ ನೆಫ್ರಾಲಜಿಸ್ಟ್‌ಗಳಾದ ಡಾ.ಅಖಿಲಾ ನಾಯಕ್, ಡಾ.ಇಸ್ತಿಕ್ ಅಹಮದ್, ಡಾ.ಹಿಮೇಶ್, ಡಾ.ಗಣೇಶ್, ಮತ್ತು ಲಿವರ್ ಸರ್ಜನ್ ಡಾ.ಸಂಜಯ್ ರಾವ್ ಈ ಸಂದರ್ಭದಲ್ಲಿ ಶುಭ ಹಾರೈಸಿದರು. ಜೀವಸಾರ್ಥಕಥೆ/ SOTTO ಕರ್ನಾಟಕದಿಂದ ಶ್ರೀಮತಿ ಚಂದ್ರಕಲಾ ಅಂಗಾಂಗ ಕಸಿ ಸಂಯೋಜಕರನ್ನು ಅಂಗಾಂಗ ಕಸಿಯಲ್ಲಿ ಜೀವಸಾರ್ಥಕಥೆಯ ಪಾತ್ರ ಮತ್ತು ಜವಾಬ್ದಾರಿಯ ಕುರಿತು ಜ್ಞಾನವನ್ನು ಹಂಚಿಕೊಳ್ಳಲು ಆಹ್ವಾನಿಸಲಾಗಿತ್ತು. ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. 45 ಮಂದಿ ಅಂಗಾಂಗ ದಾನಕ್ಕೆ ವಾಗ್ದಾನ ಮಾಡಿದರು.











**09.03.2022: ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ವಿಶ್ವ ಕಿಡ್ನಿ ದಿನಾಚರಣೆ:** ಮಂಗಳೂರು ಕೆಎಂಸಿ ಆಸ್ಪತ್ರೆ ವತಿಯಿಂದ ಸಾರ್ವಜನಿಕರಿಗಾಗಿ ವಿಶ್ವ ಮೂತ್ರಪಿಂಡ ದಿನಾಚರಣೆ ಅಂಗವಾಗಿ ಕಾರ್ಯಕ್ರಮವನ್ನು ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ. ಶುಶಾಂತ್, ಡಾ. ಮಯೂರ್ ಪ್ರಭು, ಡಾ. ಅಶೋಕ್ ಭಟ್ ಅವರು ಕಿಡ್ನಿ ಕಸಿ, ಕಿಡ್ನಿ ರೋಗ ತಡೆಗಟ್ಟುವಿಕೆ, ಮತ್ತಿತರ ಕಿಡ್ನಿ ರೋಗಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ವಿಸ್ತೃತ ವಿವರಣೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕೆಎಂಸಿ ಆಸ್ಪತ್ರೆ ವತಿಯಿಂದ ದಾನಿಗಳ ಸನ್ಮಾನ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಕಿಡ್ನಿ ಕಸಿ ಪಡೆದವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು ದಾನಿಗಳ ಕುಟುಂಬಕ್ಕೆ ಕೃತಜ್ಞತೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 200 ಸದಸ್ಯರು ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ಕೆಎಂಸಿ ಆಸ್ಪತ್ರೆ ವತಿಯಿಂದ ಜೀವಸಾರ್ಥಕಥೆ ಮಂಗಳೂರು ವಲಯದ ಕಸಿ ಸಂಯೋಜಕರನ್ನು ಸ್ಮರಣಿಕೆ ನೀಡಿ ಗೌರವಿಸಲಾಯಿತು.




L-R: Saghir Siddiqui (Regional Chief Operating Officer, KMC Hospital, Mangaluru), Dr Sushanth Kumar, Dr Ashok Bhat and Dr Mayur Prabhu (Leading nephrologists at KMC, Mangaluru)








# Programme on kidney care held

TIMES NEWS NETWORK

**Mangaluru:** On the occasion of World Kidney Day on Thursday, Kasturba Medical College Hospital organised an awareness programme on kidney health. The event featured a panel consisting of three senior doctors and transplant coordinators who talked about the importance of maintaining healthy kidneys and the various treatment options available for kidney diseases.

The panel also conducted an awareness session on the mode of registering for a kidney transplant. Live testimonials were given by patients who had undergone kidney transplants at the hospital and they shared their experiences after the transplant.

The event concluded with a felicitation ceremony for the families of cadaveric organ donors. Nephrologists Dr Sushanth Kumar, Dr Ashok Bhat, and Dr Mayur Prabhu; transplant coordinators Aruna Mallya, Vivet Suares, and Jeeva Sarthakate, social workers Laveena D'Souza and Padma Venur, were part of the expert panel.

Saghir Siddiqui, regional chief operating officer, KMC Hospital, said "We are proud to celebrate 20 years of Nephrology services at the hospital. We have done more than 6,000 kidney biopsies till date and service 2,250 dialysis sessions per month. We also regularly perform advanced procedures like tunneled dialysis catheterization and fistuloplasty. We have been the first to conduct a state government-sponsored pilot on Peritoneal Dialysis, and to offer the DNB programme in Nephrology."

**09.03.2023: ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ವಿಶ್ವ ಕಿಡ್ನಿ ದಿನದ ನಿಮಿತ್ತ ಅಂಗದಾನ ಜಾಗೃತಿ ಕಾರ್ಯಕ್ರಮ:** ಕಿಮ್ಸ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ವಿಶ್ವ ಮೂತ್ರಪಿಂಡ ದಿನದ ಪ್ರಯುಕ್ತ ಜಾಥಾ ಮತ್ತು ತಿಳುವಳಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆಸ್ಪತ್ರೆಯ ಎಲ್ಲಾ ಆಧಿಕಾರಿಗಳು ಮತ್ತು ವಿದ್ಯಾಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ವಲಯದ ಕಸಿ ಸಂಯೋಜಕರು ಭಾಗವಹಿಸಿ ಅಂಗಾಂಗ ದಾನದ ಮಹತ್ವದ ಕುರಿತು ಅರಿವುಮೂಡಿಸಿದರು. 100 ಜನರು ಮಾಹಿತಿಯನ್ನು ಪಡೆದುಕೊಂಡರು.





**10.03.2023**: **ವೆನ್ಲಾಕ್ ಆಸ್ಪತ್ರೆ ಗ್ರಂಥಾಲಯದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ರೆಡ್ ಕ್ರಾಸ್ ಸೊಸೈಟಿಯು ವೆನ್ಲಾಕ್ ಆಸ್ಪತ್ರೆಯಲ್ಲಿ ಕಾರ್ ಸ್ಟ್ರೀಟ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಅಂಗಾಂಗ ದಾನದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಜೀವಸಾರ್ಥಕತೆ/ SOTTO ಮಂಗಳೂರು ವಲಯದ ಕಸಿ ಸಂಯೋಜಕರಾದ ಶ್ರೀಮತಿ ಲವೀನಾ ಗ್ಲಾಡಿಸ್ ಡಿಸೋಜಾ ಮತ್ತು ಶ್ರೀಮತಿ ಪದ್ಮಾ ಅವರು ಅಂಗಾಂಗ ದಾನದ ಅಗತ್ಯತೆ ಮತ್ತು ಮಹತ್ವ, ಮೆದುಳು ನಿಷ್ಕ್ರಿಯತೆಯ ಪರಿಕಲ್ಪನೆಯನ್ನು ವಿವರಿಸಿದರು ಮತ್ತು ಅಂಗಾಂಗ ದಾನದ ಮಹತ್ವವನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 25 ಸದಸ್ಯರು ಭಾಗವಹಿಸಿದ್ದರು.







**10.03.2023: ಧಾರವಾಡದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಧಾರವಾಡದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಸ್ಕೌಟ್ ಮತ್ತು ಗೈಡ್ ವಿಭಾಗದ ಶಿಕ್ಷಣಾಧಿಕಾರಿಗಳಿಗಾಗಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಅಂಗಾಂಗ ದಾನದ ಮಹತ್ವದ ಕುರಿತು ಶ್ರೀ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ವಲಯದ ಕಸಿ ಸಂಯೋಜಕರು  ಭಾಗವಹಿಸಿ ಅಂಗಾಂಗದಾನದ ಕುರಿತು ಅರಿವುಮೂಡಿಸಿದರು. 25 ಜನರು ಮಾಹಿತಿಯನ್ನು ಪಡೆದುಕೊಂಡರು.




**13.03.2022: ವೆನ್ಲಾಕ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಹೊಸದಾಗಿ ನೇಮಕಗೊಂಡ ಸಮುದಾಯ ಆರೋಗ್ಯ ಅಧಿಕಾರಿಗಳಿಗೆ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ ವೆನ್ಲಾಕ್ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜೀವಸಾರ್ಥಕತೆ/ SOTTO ಮಂಗಳೂರು ವಲಯದ ಕಸಿ ಸಂಯೋಜಕಿ ಶ್ರೀಮತಿ ಪದ್ಮಾ ಅವರು ಅಂಗಾಂಗ ದಾನದ ಅಗತ್ಯತೆ ಮತ್ತು ಪ್ರಾಮುಖ್ಯತೆ, ಬ್ರೈನ್ ಡೆಡ್ ಪರಿಕಲ್ಪನೆಯ ಕುರಿತು PPT ಪ್ರಸ್ತುತಿ ಪಡಿಸಿದರು. ಶ್ರೀಮತಿ ಲವೀನಾ ಗ್ಲಾಡಿಸ್ ಡಿಸೋಜಾ ಜೀವಸಾರ್ಥಕತೆ/ SOTTO ಮಂಗಳೂರು ವಲಯದ ಮತ್ತೊಬ್ಬ ಕಸಿ ಸಂಯೋಜಕಿ ಜೀವಸಾರ್ಥಕಥೆ ಮತ್ತು ಅಂಗಾಂಗ ದಾನದ ಪ್ರತಿಜ್ಞೆಯ ಮಹತ್ವದ ಕುರಿತು ಪಿಪಿಟಿ ಪ್ರಸ್ತುತಿ ಮಾಡಿದರು.

ಈ ಕಾರ್ಯಕ್ರಮದಲ್ಲಿ ಹೊಸದಾಗಿ ನೇಮಕಗೊಂಡ ಸುಮಾರು 30 ಸಮುದಾಯ ಆರೋಗ್ಯ ಅಧಿಕಾರಿಗಳು ಭಾಗವಹಿಸಿದ್ದರು.



**16.03.2023: ಮಿದುಳು ಸಾವಿನ ನಂತರ ಅಂಗಾಂಗ ದಾನದ ಕುರಿತು ಧಾರ್ಮಿಕ ದೃಷ್ಟಿಕೋನಗಳ ವಿಚಾರ ಸಂಕಿರಣ**: NAK (ನೆಫ್ರಾಲಜಿ ಅಸೋಸಿಯೇಷನ್ ಆಫ್ ಕರ್ನಾಟಕ) ಮತ್ತು SOTTO (ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ) ಸಹಯೋಗದೊಂದಿಗೆ API ಭವನದಲ್ಲಿ ಮೆದುಳಿನ ಸಾವಿನ ನಂತರ ಅಂಗ ದಾನದ ಕುರಿತು ಧಾರ್ಮಿಕ ದೃಷ್ಟಿಕೋನಗಳ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಅಂಗಾಂಗ ದಾನ ಮತ್ತು ಕಸಿ ಮಾಡುವ ಕುರಿತು ಧಾರ್ಮಿಕ ದೃಷ್ಟಿಕೋನಗಳನ್ನು ವಿವರಿಸಲು ಧಾರ್ಮಿಕ ಮುಖಂಡರನ್ನು ಒಟ್ಟಿಗೆ ಸೇರಿಸಲಾಗಿತ್ತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರಾದ ಶ್ರೀ ರಂದೀಪ್ ಡಿ, ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಡಾ. ದೇವಿಪ್ರಸಾದ್ ಶೆಟ್ಟಿ ಖ್ಯಾತ ಕಾರ್ಡಿಯೋಥೊರಾಸಿಕ್ ಸರ್ಜನ್ ನಾರಾಯಣ ಹೆಲ್ತ್ ಸೇರಿದಂತೆ ವಿವಿಧ ಧರ್ಮಗಳ ಗಣ್ಯರು ಮತ್ತು ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.







KARNATAKA
SOTTO
SEMINAR ON
RELIGIOUS VIEWS
ON


SEMINAR ON
"RELIGIOUS VIEWS ON ORGAN DONATION
AFTER BRAIN DEATH"









**16.03.2023: ಕರ್ವಾಲಿ ಮೈದಾನ ಮಂಗಳೂರಿನಲ್ಲಿ ಅಂಗಾಂಗ ದಾನದ ಕುರಿತು IEC ಸಾಮಗ್ರಿಗಳ ಪ್ರದರ್ಶನ:** DHO ಇಲಾಖೆಯು ಅಂಗಾಂಗ ದಾನ ಮತ್ತು ಇತರ ಆರೋಗ್ಯ ಸೌಲಭ್ಯಗಳ ಕುರಿತು IEC ಸಾಮಗ್ರಿಗಳ ಪ್ರದರ್ಶನ ಕಾರ್ಯಕ್ರಮವನ್ನು ಮಂಗಳೂರು ಸಮೀಪದ ಕರಾವಳಿ ಮೈದಾನದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿರ್ಗತಿಕರಿಗೆ ಕಿಟ್ ವಿತರಿಸಿದರು, ಮತ್ತು ಜೀವಸಾರ್ಥಕಥೆ/ SOTTO ಮಂಗಳೂರು ವಲಯದ ಕಸಿ ಸಂಯೋಜಕರು ಅಂಗಾಂಗ ದಾನದ IEC ಸಾಮಗ್ರಿಗಳನ್ನು ಸ್ಟಾಲ್ ಮೂಲಕ ಪ್ರದರ್ಶಿಸಿದರು.




**17.03.2022: ವೆನ್ಲಾಕ್ ಆಸ್ಪತ್ರೆ ಗ್ರಂಥಾಲಯದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ರೆಡ್ ಕ್ರಾಸ್ ಸೊಸೈಟಿಯು ವೆನ್ಲಾಕ್ ಆಸ್ಪತ್ರೆಯಲ್ಲಿ ಬೆಸೆಂಟ್ ಕಾಲೇಜು ವಿದ್ಯಾರ್ಥಿಗಳಿಗೆ ಅಂಗಾಂಗ ದಾನದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ SOTTO ಮಂಗಳೂರು ವಲಯದ ಕಸಿ ಸಂಯೋಜಕರಾದ ಶ್ರೀಮತಿ ಪದ್ಮಾ ಮತ್ತು ಶ್ರೀಮತಿ ಲವೀನಾ ಗ್ಲಾಡಿಸ್ ಡಿಸೋಜಾ ಅವರು ಅಂಗಾಂಗ ದಾನದ ಅಗತ್ಯತೆ ಮತ್ತು ಮಹತ್ವ, ಮೆದುಳು ನಿಷ್ಕ್ರಿಯತೆಯ ಪರಿಕಲ್ಪನೆಯನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 25 ಸದಸ್ಯರು ಭಾಗವಹಿಸಿದ್ದರು.





**19.03.2023: ಬೆಂಗಳೂರಿನಲ್ಲಿ ವಿಶ್ವ ಕಿಡ್ನಿ ದಿನಾಚರಣೆ:** ಕಿಡ್ನಿ ಯೋಧರು, ಮತ್ತು ಮೂತ್ರಪಿಂಡಶಾಸ್ತ್ರಜ್ಞರು, ಬೆಂಗಳೂರು IMA ಸಹಯೋಗದೊಂದಿಗೆ ವಿಶ್ವ ಕಿಡ್ನಿ ದಿನವನ್ನು ಪ್ಯಾನೆಲ್ ಚರ್ಚೆಯೊಂದಿಗೆ ಆಚರಿಸಲು ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಕಾರ್ಯಕ್ರಮವನ್ನು ಮುಖ್ಯ ಅತಿಥಿ ಡಾ. ಗುರುದೇವ್ ಮತ್ತು ಗೌರವ ಅತಿಥಿ ಡಾ. ವೇಣುಗೋಪಾಲ್ ಐಎಂಎ ಅಧ್ಯಕ್ಷರು ಉದ್ಘಾಟಿಸಿದರು. ಶ್ರೀ ರಂದೀಪ್ ಡಿ ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಕರ್ನಾಟಕ ಸರ್ಕಾರ ಅವರು ಸಭೆಯೊಂದಿಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಮಧುಮೇಹ ತಜ್ಞರು, ನೇತ್ರಶಾಸ್ತ್ರಜ್ಞರು, ಹೃದ್ರೋಗ ತಜ್ಞರು, ಸ್ತ್ರೀರೋಗ ತಜ್ಞರು ಮತ್ತು ಸಾಮಾನ್ಯ ವೈದ್ಯರೊಂದಿಗೆ ಬೆಂಗಳೂರಿನ ಖ್ಯಾತ ಮೂತ್ರಪಿಂಡಶಾಸ್ತ್ರಜ್ಞರು ಸಂಚಾಲಕರಾಗಿ ಅತ್ಯುತ್ತಮವಾದ ಸಂವಾದವನ್ನು ನೆರವೇರಿಸಿದರು.




**Event Flow**

| | |
|---|---|
| 10.00 am -10.05 am | Welcome address |
| 10.05 am -10.10 am | Lighting the Lamp by the Chief Guest (Dr. Gurudev) and Guest of Honour (Dr. Venugopal - IMA President) |
| 10.10 am - 10.20 am | Chief Guest Address - Preventive Measures for CKD is Critical |
| 10.20 am - 10.25 am | Honouring the Chief Guest by IMA & Kidney Warriors Foundation |
| 10.25 am - 10.50 am | Panel Discussion with Diabetologists and Ophthalmologists (Dr. Manohar, Dr. Bhavana Sosale, Dr. Dhwani Shah, and Dr. Santosh Sharma - Moderated by Dr. Arvind Canchi) |
| 10.50 am - 11.10 am | Nutrition - Life style Choices driving growth of CKD (Sunitha Rao) |
| 11.10 am - 11.35 am | Panel Discussion with Cardiologists (Dr. Ranjan Shetty and Dr. Somalaram Venkatesh - Moderated by Dr. Mythri Shankar) |
| 11.35 am - 11.45 am | Panel Discussion with Gynaecologists (Dr. Shefalika and Dr. Kavitha Kovi - Moderated by Dr. Kristin George) |
| 11.45 am - 12.15 pm | Panel Discussion with General Physicians (Dr. Padma L and Dr. Anuradha Paramesh - Moderated by Dr. Sundar Sankaran) |
| 12.15 pm - 12.20 pm | Welcoming Mr Randeep, Health Commissioner |
| 12.20 pm - 12.30 pm | Screening and Ground Work - Spade Work on Preventive Measures by Palm Trust and Kidney Warriors Foundation |












HEALTH


KIDNEY
Warriors Foundation
nephroplus
World Kidney Day
presents
KIDNEY HEALTH
FOR ALL





**19.03.2023: ಗದಗ ಜಿಲ್ಲೆಯ ಗಜೇಂದ್ರಗಡದಲ್ಲಿ ಪ್ರತಿಜ್ಞೆ ಶಿಬಿರ ಮತ್ತು ರ್ಯಾಲಿಯೊಂದಿಗೆ ಅಂಗಾಂಗ ದಾನದ ಕುರಿತು ಸಾರ್ವಜನಿಕ ಜಾಗೃತಿ:** ಕರ್ನಾಟಕ ಮಾನವ ಹಕ್ಕುಗಳ ಜನಸೇವಾ ಸಂಸ್ಥೆ ಗದಗ ಮತ್ತು ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ, (GIMS) ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗದಗ ಸಹಯೋಗದೊಂದಿಗೆ. ಗದಗ ಜಿಲ್ಲೆಯ ಗಜೇಂದ್ರಗಡದಲ್ಲಿ ಅಂಗಾಂಗ ದಾನ, ನೇತ್ರದಾನ, ದೇಹದಾನ ಹಾಗೂ ರಕ್ತದಾನ ಜಾಗೃತಿ ಶಿಬಿರ ಹಾಗೂ ಜಾಥಾ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೋಣ ತಾಲೂಕಿನ ಮಾಜಿ ಶಾಸಕ ಶ್ರೀ ಜಿ.ಎಸ್.ಪಾಟೀಲ ವಹಿಸಿದ್ದರು. ನಿಡಗುಂದಿ ಕೊಪ್ಪ ಮಠದ ಅಭಿನವ ಶ್ರೀ ಚನ್ನಬಸವ ಮಹಾಸ್ವಾಮಿಗಳು ಅಂಗಾಂಗ ದಾನ ಮತ್ತು ದೇಹದಾನ ಜಾಗೃತಿ ಜಾಥಾವನ್ನು ಉದ್ಘಾಟಿಸಿದರು. K.L.E ವೈದ್ಯಕೀಯ ಕಾಲೇಜು, ಅನಾಟಮಿ ವಿಭಾಗದ ಮುಖ್ಯಸ್ಥರು ಡಾ.ಮಹಾಂತೇಶ ರಾಮಣ್ಣನವರ್, ದೇಹದಾನದ ಮಹತ್ವವನ್ನು ತಿಳಿಸಿಕೊಟ್ಟರು. GIMS ಅನ್ಯಾಟಮಿ ವಿಭಾಗದ ಮುಖ್ಯಸ್ಥರು ಡಾ.ರೂಪಾ ಬಾಳಿಹಳ್ಳಿಮಠ, ಡಾ.ಗಜಾನನ ಚನ್ನಶೆಟ್ಟಿ, ಪ್ರಾಧ್ಯಾಪಕರು ನೇತ್ರವಿಜ್ಞಾನ ವಿಭಾಗ GIMS ಡಾ.ಶಿವಾನಂದ ಹೂಗಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ.ಶೇಖಪ್ಪ ಬಿ.ಕಟ್ಟಿಮನಿ ಜೀವಸಾರ್ಥಕತೆ ಕಲ್ಬುರ್ಗಿ ವಲಯದ ಕಸಿ ಸಂಯೋಜಕರು ಅಂಗಾಂಗ ದಾನದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 54 ಜನ ಅಂಗದಾನ, ದೇಹದಾನ ಮತ್ತು ನೇತ್ರದಾನಕ್ಕೆ ಹೆಸರು ನೋಂದಾಯಿಸಿಕೊಂಡರು. ಕಾರ್ಯಕ್ರಮದಲ್ಲಿ 1000ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.










ಕರ್ನಾಟಕ ಮಾನವ
ಸಂಸ್ಥೆ (ನೋ) ಗದಗ ಜಿಲ್ಲೆ
ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಇವರುಗಳ ಸಹಯೋಗದಲ್ಲಿ
ಅಂಗಾಂಗ, ದೇಹ, ನೇತ್ರ ಮತ್ತು ರಕ್ತದಾನ ಶಿಬಿರ
ರೋಪಕಾರಾರ್ಥಮ್ ಇದಮ್ ಶರೀರಂ" ಎಂಬ ಘೋಷಾ ವಾಕ್ಯದಡಿಯಲ್ಲಿ
ಜಾಗೃತ ಜಾಥಾ
RPSO

ಟಕ ಮಾನವ ಹಕ್ಕುಗಳ ಜನಸೇವಾ ಸಂಸ್ಥೆ (ನೋ) ಗದಗ ಜಿಲ್ಲೆ
ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಇವರುಗಳ ಸಹಯೋಗದಲ್ಲಿ
ಂಗಾಂಗ, ದೇಹ, ನೇತ್ರ ಮತ್ತು ರಕ್ತದಾನ ಶಿಬಿರ
ರ್ಥಮ್ ಇದಮ್ ಶರೀರಂ" ಎಂಬ ಘೋಷಾ ವಾಕ್ಯದಡಿಯಲ್ಲಿ
ಜಾಗೃತ ಜಾಥಾ